



ಮಹಡಿ ಮೆಟ್ಟಿಲುಗಳನ್ನು ಮಕ್ಕಳಿಗೆ ಜಾರುಬಂಡಿ ಆಟಿಕೆಯಾಗಿ ಮಾರ್ಪಡಿಸಿದ್ದ ಡಾರ್ವಿನ್



ಮಹಾ ವಿಜ್ಞಾನಿಯ ಶಯ್ಯಾಗೃಹ



ಡಾರ್ವಿನ್‌ನ ಅಧ್ಯಯನ ಕೊಠಡಿ

ಮತ್ತು ಅಲ್ಮೆರಾಗಳಲ್ಲಿ ಡಾರ್ವಿನ್ ತನ್ನ ಸಂಶೋಧನೆಯಲ್ಲಿ ಉಪಯೋಗಿಸುತ್ತಿದ್ದ ಪರಿಕರಣಗಳು, ಅವನ ಹ್ಯಾಟ್, ಊರುಗೋಲು ಇತ್ಯಾದಿ, ಇತ್ಯಾದಿ.

ಡಾರ್ವಿನ್ ಮನೆಯಲ್ಲಿ ನಿಂತಾಗ ನನಗೆ ಅನ್ನಿಸಿದ್ದು: "ಇಲ್ಲಿಯೇ ಡಾರ್ವಿನ್ ತನ್ನ 'ಆರಿಜಿನ್ ಆಫ್ ಸ್ಪೀಸೀಸ್ ಬೈ ನ್ಯಾಚುರಲ್ ಸೆಲೆಕ್ಷನ್' ಬರೆದದ್ದು. (ಅವನಿಗೆ ಈ ಸಿದ್ಧಾಂತದ ಬಗ್ಗೆ ಹೊಳೆದದ್ದು ಅವನ ಹಿಂದಿನ ಮನೆಯಲ್ಲಿ). ಅವನು ಇಲ್ಲಿ ಕುಳಿತೇ ಇಪ್ಪತ್ತಕ್ಕೂ ಮೀರಿ ಗ್ರಂಥಗಳನ್ನು ರಚಿಸಿದ್ದು. ಇದು ಮಹಾಸನ್ನಿಧಿ ಅಲ್ಲದೆ ಮತ್ತೇನು?".

ಡಾರ್ವಿನ್‌ನ ಶಯ್ಯಾಗೃಹದಲ್ಲಿ ರಥವನ್ನು ಹೋಲುವ ಹಳೆಗಾಲದ ಮಂಚ. ಇನ್ನೊಂದೆಡೆ, ಕೊಠಡಿಯಲ್ಲಿ ಒಂದು ಪಿಯಾನೊ. ಪ್ರತಿದಿನ ಊಟದ ನಂತರ ಅವನ ಹೆಂಡತಿ ಪಿಯಾನೊ ನುಡಿಸಬೇಕು. ಕಾದಂಬರಿ ಮುಂತಾದುವನ್ನು ಅವನಿಗಾಗಿ ಓದಬೇಕು. ರಾತ್ರಿ ಊಟದ ನಂತರ ಅವಳೊಡನೆ ಬ್ಯಾಕ್ ಗ್ಯಾಮನ್ ಆಟ. ಡಾರ್ವಿನ್ ರಸಿಕ, ಹತ್ತು ಮಕ್ಕಳ ತಂದೆ.

ನಡಿಗೆ ಡಾರ್ವಿನ್ನನ ಪ್ರಿಯ ಹವ್ಯಾಸ. ಇದಕ್ಕಾಗಿಯೇ ಮನೆಯ ಹಿಂದೆ ಮೂರು ಎಕರೆ ಜಮೀನನ್ನು ಕೊಂಡು ಅಲ್ಲಿ ತನ್ನ ನಡಿಗೆಗಾಗಿ 400 ಮೀಟರ್ ಉದ್ದದ ಕಾಲುದಾರಿಯನ್ನು ನಿರ್ಮಿಸಿದ. ಇದೇ ಪ್ರಖ್ಯಾತ 'ಸ್ಯಾಂಡ್ ವಾಕ್'. ಡಾರ್ವಿನ್ ಪ್ರತಿದಿನ ಅನೇಕ ಬಾರಿ ಇಲ್ಲಿ ನಡೆದು ವಿಹರಿಸುತ್ತಿದ್ದ. ಕೆಲವೊಮ್ಮೆ ಅವನ ಎಂಟು ನಾಯಿಗಳೂ ಇರುತ್ತಿದ್ದವು. ಪ್ರಾಯಶಃ ಅವನ ಆಲೋಚನೆಗಳು ಜರುಗುತ್ತಿದ್ದದ್ದು ಈ ನಡಿಗೆಗಳಲ್ಲಿಯೇ ಏನೋ. ನನಗೆ ತಿಳಿದಿರುವಂತೆ ಐನ್‌ಸ್ಟೀನ್ ಕೂಡ ದೀರ್ಘ ವಾಕಿಂಗ್ ಮಾಡುತ್ತಾ ಆಲೋಚಿಸುತ್ತಿದ್ದ.

ನಾವು ಈ ಕಾಲುದಾರಿಗೆ ಧಾವಿಸಿದೆವು. ಅಲ್ಲದೆ ಸಿಬ್ಬಂದಿ ಇಬ್ಬರನ್ನು ಆಹ್ವಾನಿಸಿದೆವು. ಅವರು ಸಂತೋಷದಿಂದ ನಮ್ಮೊಡನೆ ಬಂದು ನಾವು ನೀಡಿದ ನನ್ನ ಪುಸ್ತಕದ ಪ್ರತಿಗಳನ್ನು ಸ್ವೀಕರಿಸಿದರು. ಅಲ್ಲದೆ ಆ ಕಾಲುದಾರಿಯ ಮಹತ್ವವನ್ನು ವಿವರಿಸಿದರು. ನಾವು ತೆಗೆದ ಅನೇಕ ವಿಡಿಯೊಗಳಿಗೆ ಮಾಹಿತಿಯನ್ನೂ ನೀಡಿದರು.

ಎರಡು ಬಾರಿ ನಾನು ಈ ದಾರಿಯಲ್ಲಿ ಅಡ್ಡಾಡಿದೆ. ಡಾರ್ವಿನ್ ಇಲ್ಲಿ ಅಡ್ಡಾಡುತ್ತಾ ಏನೇನು ಯೋಚಿಸಿದ್ದಿರಬಹುದು ಎಂದು ಊಹಿಸಲೆತ್ನಿಸಿದೆ. ದಾರಿ ಅಂತ್ಯಗೊಳ್ಳುವಲ್ಲಿ ಒಂದು ಮಂಟಪ. ಅಲ್ಲಿ ಇಬ್ಬರು ಕೂರಬಹುದಾದ ಪೀಠವೊಂದು. ದಂಪತಿಗಳಿಗೆ ಫೋಟೊ ಅವಕಾಶ. ಅಲ್ಲಿಯೇ ವಾಕ್ ಮಾಡುತ್ತಿದ್ದ ದಂಪತಿಯನ್ನು ನಿಲ್ಲಿಸಿ, 'ಡಾರ್ವಿನ್ ಇಲ್ಲಿಯೇ ವಾಕ್ ಮಾಡುತ್ತಿದ್ದ ಎಂಬುದು ನಿಮಗೆ ಗೊತ್ತಿದೆಯೇ?' ಎಂದು ಕೇಳಿದೆ. 'ಆ ಬಗ್ಗೆ ನಮಗೆ ತಿಳಿಯದು. ಸುಮ್ಮನೆ ವಾಕಿಂಗ್ ಹೋಗುತ್ತಾ ಇದ್ದೀವಿ' ಎನ್ನುವ ಉತ್ತರ ಎದುರಾಯಿತು.